**ದಿನಾಂಕಃ 22.06.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀಸವಾಲುಃಎದುರುದಾರರ ಪರ ವಕೀಲರಾದ ಶ್ರಿ. ಎಸ್ ಆರ್ ವಕೀಲರಿಂದಃ**

5. ಸ್ಟಾರ್ ಆಪ್ ಮೈಸೂರು ಪತ್ರಿಕೆಯಲ್ಲಿ ಸ್ವತ್ತೀನ ಮಾರಾಟದ ಬಗ್ಗೆ ಪ್ರಕಟಣೆ ಬರುವುದಕ್ಕಿಂತ ಮೊದಲೂ, ನನಗೆ ಈ ಬಗ್ಗೆ ಮಾಹಿತಿ ಇತ್ತು ಎನ್ನುವುದು ಸರಿಯಲ್ಲ. ನನ್ನ ಅಕ್ಕ ಯಾಸ್ಮಿನ್ ಮರಣ ಹೊಂದುವವರೆಗೂ ನನ್ನ ತಮ್ಮ ರಶೀದ್ ಜೊತೆ ವಾಸವಾಗಿದ್ದರು ಎಂದರೆ , ನನ್ನ ತಮ್ಮ ನನ್ನ ಅಕ್ಕನ ಜೊತೆ ವಾಸವಾಗಿದ್ದರು. ನನ್ನ ಜೊತೆ ಯಾಸ್ಮೀನರವರ ಬಾಂದವ್ಯ ಚೆನ್ನಾಗಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಯಾಸ್ಮೀನ್ ರವರು ಮಾಡಿದ ಅವರ 1/3 ಅಂಶದ ಭಾಗದ ವಿಲ್ ನ ಬಗ್ಗೆ ಆಕ್ಷೇಪ ಇಲ್ಲ ಎಂದರೆ ಸರಿಯಲ್ಲ. ನಾನು ಈ ಕೇಸ್ ನಲ್ಲಿ ವಿಲ್ ತಪ್ಪು ಎಂದು ಹೇಳಿದ್ದೇನೆ. ನಾನು ಅರ್ಜಿಯಲ್ಲಿ

ಯಾಸ್ಮೀನ್ ರವರಿಗೆ 1/3 ಅಂಶದ ಭಾಗದ ವಿಲ್ ಮಾಡಲು ಮಾತ್ರ ಬರುತ್ತದೆ ಮತ್ತು 2/3 ಅಂಶ ಭಾಗದ ವಿಲ್ ಮಾಡಲು ಬರುವುದಿಲ್ಲ ಎಂದು ಹೇಳಿದ್ದೇನೆ ಎಂದರೆ ಸರಿಯಲ್ಲ. ಯಾಸ್ಮೀನ್ ರವರ ವಿಲ್ ಅವರ 1/3 ಅಂಶ ಭಾಗದ ಮಟ್ಟಿಗೆ ಕ್ರಮಬದ್ಧವಾಗಿದೆ ಎಂದರೆ ಸರಿಯಲ್ಲ. ಯಾಸ್ಮೀನ್ ರವರು ಮಾಡಿದ 1/3 ಅಂಶ ಭಾಗದ ವಿಲ್ ನ ಆಸ್ತಿಯ ಮೇಲೆ ನನಗೆ ಹಕ್ಕಿಲ್ಲ ಎಂದರೆ ಸರಿಯಲ್ಲ. ಉಳಿದ 2/3 ಅಂಶ ಭಾಗದಲ್ಲಿ ನನಗೆ , ನನ್ನ ತಮ್ಮ ರಶೀದ್ ಮತ್ತು ಇನ್ನೊಬ್ಬ ಅಕ್ಕ ಪರ್ವಿನ್ ರವರಿಗೆ ಹಕ್ಕಿದೆ ಎಂದರೆ , ಇರಬಹುದು.

**<u>ಮರುವಿಚಾರಣೆಃ ಇಲ್ಲ</u>**

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

22.06.2024

(ರವೀಂದ್ರ ಹೆಗಡೆ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು.